**O.S.No.5/2014 DW.2**

ಮಧ್ಯಂತರ ಅರ್ಜಿ ಮೇಲೆ ಆದೇಶದ ಪ್ರಕಾರ ಸಾಕ್ಷಿಯನ್ನು ದಿನಾಂಕಃ-27-11-2021 ರಂದು ಪುನಃ ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ-ಶ್ರೀ.ಎಸ್.ಕೆ.ಎಚ್ ವಕೀಲರಿಂದ ಪ್ರತಿವಾದಿ-2 ಎ ದಿಂದ ಪ್ರತಿವಾದಿ-2 ಈ ಪರವಾಗಿ**

ಜಮಖಂಡಿಯಲ್ಲಿ ಮದ್ಯದ ಅಂಗಡಿ ನಡೆಸುವ ಪರವಾನಿಗೆ ಇದೆ. ಬಾರ್ ನಡೆಸಲು ಲೈಸೆನ್ಸ ಇದ್ದು, ಅದು ನನ್ನ ಹೆಸರಿನಲ್ಲಿ ಇದೆ. 1975 ರಲಿ ಸದರಿ ಬಾರನ್ನು ಪ್ರಾರಂಭ ಮಾಡಿದ್ದು

ನನ್ನ ಹೆಸರಿನಲ್ಲಿ ಪರವಾನಿಗೆ ಇದ್ದು ಪ್ರಶಾಂತ ಬಾರ್ ಎಂದು ಹೆಸರು ಇತ್ತು. ಎಷ್ಟು ವರ್ಷದಿಂದ ಎಷ್ಟು ವರ್ಷದವರೆಗೆ ಪ್ರಶಾಂತ ಬಾರ್ ನಡೆಸಿದ್ದೇನೆ ಎಂದು ಈಗ ನೆನಪಿನಿಂದ ಹೇಳಲು ಆಗುವುದಿಲ್ಲ. ಸಾಕ್ಷಿ ಈಗ ಪರವಾನಿಗೆಯ ಪ್ರತಿಯನ್ನು ನೋಡಿ ತಮ್ಮದೇ ಎಂದು ಗುರುತಿಸುತ್ತಾರೆ. ಅದನ್ನು ನಿಡಿ-419 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಭಾವಚಿತ್ರ ತೋರಿಸಿದ್ದು ಅದರಲ್ಲಿ ಸುಶೀಲಾಬಾಯಿ ಇವರನ್ನು ಗುರುತಿಸಿದ್ದು ಸದರಿ ಭಾವಚಿತ್ರವನ್ನು ನೋಡಿ ಸುಶೀಲಾಬಾಯಿಯವರ ಹಿಂದುಗಡೆ ಇರುವ ನೀಲಿ ಸೀರೆಯವರನ್ನು ರೇಖಾ ಎಂದು ಗುರುತಿಸುತ್ತಾರೆ. ಭಾವಚಿತ್ರವನ್ನು ನಿಡಿ-420 ಎಂದು ಗುರುತಿಸಲಾಯಿತು. ಸುಶೀಲಾಬಾಯಿ ಇವರು ಮೃತರಾಗುವ ಕಾಲಕ್ಕೆ ರೇಖಾರವರ ಜೊತೆ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ ಇನ್ನೊಂದು ಭಾವಚಿತ್ರ ತೋರಿಸಿದ್ದು ಅದರಲ್ಲಿ ಶ್ರೀಮತಿ.ಸುಶೀಲಾಬಾಯಿ ಹಾಗೂ ಬಸಪ್ಪ ತೇಲಿ ಸಾ-ಹಿಪ್ಪರಗಿಯವರು ಇದ್ದು ಅದನ್ನು ನಿಡಿ-421 ಎಂದು ಗುರುತಿಸಲಾಯಿತು. ನಾನು 421 ರಲ್ಲಿ ಬಸಪ್ಪ ತೇಲಿರವರು ಸುಶೀಲಾಬಾಯಿಯವರನ್ನು ಭೇಟಿಯಾದ ಸಂದರ್ಭ ಗೊತ್ತಿಲ್ಲ. ನಮ್ಮ ಮನೆಯಲ್ಲಿ ಇದ್ದಾಗ ಹಾಗೂ ಮುಂಬೈಯಲ್ಲಿ ಇದ್ದಾಗ ಸದರಿ ಸುಶೀಲಾಬಾಯಿಯವರನ್ನು ಭೇಟಿ ಮಾಡಿದ್ದರು ಎಂದು ಹೇಳುತ್ತಾರೆ. ನಿಡಿ-421 ರಲ್ಲಿ ಕಂಡು ಬರುವ ಬಸಪ್ಪ ತೇಲಿರವರ ವಿರುದ್ದ ನಾನು ಖಾಸಗಿ ಪಿರ್ಯಾದು ದಾಖಲೆ ಮಾಡಿದ್ದೇನೆ. ಮೃತ್ಯುಪತ್ರಕ್ಕೆ ಸುಳ್ಳು ಸಾಕ್ಷಿ ಹಾಕಿದ್ದಾರೆ ಎಂದು ಬಸಪ್ಪ ತೇಲಿರವರ ವಿರುದ್ದ ಖಾಸಗಿ ಪಿರ್ಯಾದು ದಾಖಲು ಮಾಡಿದ್ದೇನೆ. ಸುರೇಶ ಕಾಳೆ ಇವರ ವಿರುದ್ದವು ಒಂದು ಖಾಸಗಿ ಪಿರ್ಯಾದನ್ನು ದಾಖಲ ಮಾಡಿದ್ದೇನೆ ಎಂದರೆ ಸರಿ. ಅದನ್ನು ಖೊಟ್ಟಿ ಮೃತ್ಯುಪತ್ರ ಮಾಡಿದ್ದಾರೆ ಎಂದು ಖಾಸಗಿ ಪಿರ್ಯಾದು ದಾಖಲ ಮಾಡಿದ್ದೇನೆ. ನ್ಯಾಯಾಲಯದಲ್ಲಿ ಸದರಿ ಖಾಸಗಿ ದೂರನ್ನು ವಜಾ ಮಾಡಲಾಗಿದೆ ಎಂದರೆ ಸರಿ. ಯಾವ ಕಾರಣಕ್ಕಾಗಿ ಎಂದರೆ ನನಗೆ ಗೊತ್ತಿಲ್ಲ. ಅದರ ಬಗ್ಗೆ ನಂತರ ನಾನು ವಕೀಲರ ಬಳಿ ವಿಚಾರ ಮಾಡಿಲ್ಲ. ಮೃತ ಸುಶೀಲಾಬಾಯಿ ಇವರು ಯಾವುದೇ ಮೃತ್ಯುಪತ್ರ ಬರೆದಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ್ಯುಪತ್ರವನ್ನು ನೋಂದಾವಣಿ ಮಾಡುವ ಕಾಲಕ್ಕೆ ನಾನು ಅದನ್ನು ನೋಡಿದ್ದೇನೆ. ನೋಂದಾವಣಿ ಮಾಡಿರುವ ವಿಷಯ ಗೊತ್ತಾದ ನಂತರ ಅದರ

ಪ್ರತಿಯನ್ನು ಪಡೆದು ವಿಧಿ ವಿಜ್ಞಾನ ಕೇಂದ್ರಕ್ಕೆ ಅದರ ಸತ್ಯಾಸತ್ಯತೆ ಬಗೆ ಕಳುಹಿಸಿದ್ದೆ. ಆಗ ಖಾಸಗಿ ಫಿರ್ಯಾದಿ ನಾನು ಕೊಟ್ಟಿರಲಿಲ್ಲ. ವಿಧಿ ವಿಜ್ಞಾನ ಕೇಂದ್ರದ ಅಭಿಪ್ರಾಯದಂತೆ ಸದರಿ ಮೃತ್ಯುಪತ್ರಕ್ಕೆ ಸುಶೀಲಾಬಾಯಿಯವರು ಸಹಿ ಮಾಡಿಲ್ಲ ಎಂದು ವರದಿ ಬಂದಿತ್ತು. ಹೋಲಿಕೆ ಮಾಡಿ ನೋಡಲು ಅನುಕೂಲವಾಗುವಂತೆ ಸಮಕಾಲಿನ ಯಾವುದೇ ದಾಖಲೆಗಳನ್ನು ಕೊಡದೇ ಇರುವ ಕಾರಣ ಯಾವುದೇ ನಿರ್ಧಿಷ್ಟ ಅಬಿಪ್ರಾಯ ಪಡೆದೇ ಅದನ್ನು ಮರಳಿ ಕಳುಹಿಸಿದ್ದಾರೆ ಎಂರದೆ ಸರಿಯಲ್ಲ. ನಾನು ಆ ಸಮಯದಲ್ಲಿ ಸಹಿಗಳನ್ನು ಕಳುಹಿಸಿದ್ದೆ. ಸಾಕ್ಷಿ ಪುನಃ ನಾನು ಸುಶೀಲಾಬಾಯಿಯವರ ಸಹಿಗಳ ಝುರಾಕ್ಸ ಪ್ರತಿಗಳನ್ನು ಕಳಹಿಸಿದ್ದೆ. ನಂತರ ತನಿಖಾಧಿಕಾರಿಯವರು ಸುಶೀಲಾಬಾಯಿಯವರ ಸಹಿಗಳು ಇರುವ ಮೂಲ ದಾಖಲೆಗಳನ್ನು ಕಳುಹಿಸಿದ್ದಾರೆ. ತನಿಖಾಧಿಕಾರಿಗಳು ಕಳುಹಿಸಿದ ಸಹಿಗಳಿಗೆ ಸಂಬಂಧಿಸಿದಂತೆ ವಿಧಿ ವಿಜ್ಞಾನ ಕೇಂದ್ರದಿಂದ ಅದೇ ರೀತಿ ಅಭಿಪ್ರಾಯಪಡಲಾಗಿತ್ತು ಎಂದರೆ ಸರಿಯಲ್ಲ. ಸುಶೀಲಾಬಾಯಿಯವರು ಯಾವುದೇ ಮೃತ್ಯುಪತ್ರ ಬರೆದಕೊಟ್ಟಿಲ್ಲ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿನ ಹಕ್ಕು ಮೃತ್ಯುಪತ್ರದಂತೆ ರೇಖಾ ಇವರಿಗೆ ಹೋಗುತ್ತದೆ ಎಂದು ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ್ಯುಪತ್ರದಲ್ಲಿನ ಸಾಕ್ಷಿಗಳಿಗೆ ಸಾಕ್ಷ್ಯ ನುಡಿಯಲು ಬಂದರೆ ಸುಳ್ಳು ಪ್ರಕರಣ ದಾಖಲ ಮಾಡುತ್ತೇನೆ ಎಂದು ಧಮಕಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನನಗಾಗಲೀ ಮತ್ತು ಸುರೇಶಗಾಗಲೀ ಯಾವುದೇ ಹಕ್ಕು ಇರದೇ ಇದ್ದರು ರೇಖಾಗೆ ತೊಂದರೆ ಕೊಡವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಾಜಿ ಎಮ್.ಎಲ್.ಎ ಇರುವ ಕಾರಣ ನಾನು ನನ್ನ ಪ್ರಭಾವ ಬಳಿಸಿ ವರದಿಯನ್ನು ತರಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿ ರುವರು.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ಸಾಕ್ಷಿಯ ಸಹಿ